

# ವಿಚಿತ್ರ ತೋಪು

ಕೆನಡಾದ ಸಾಸ್ಕಾಚವಾನ್‌ನ ಹ್ಯಾಫರ್ಡ್ ನಗರದಿಂದ ಸುಮಾರು ಇಪ್ಪತ್ತು ಕಿಲೋಮೀಟರ್ ದೂರದ ವಾಯವ್ಯ ದಿಕ್ಕಿನಲ್ಲಿ ಅಂಕುಡೊಂಕಾಗಿ ಬೆಳೆದ ಮರಗಳಿರುವ ವಿಚಿತ್ರವಾದ ತೋಪು ಇದೆ. ಇಲ್ಲಿರುವ ಮರಗಳ ಕಾಂಡ ಹಾಗೂ ಕೊಂಬೆಗಳನ್ನು ನೋಡಿದರೆ ಯಾರೋ ಎರಡೂ ಕೈಗಳಿಂದ ಬಲವಾಗಿ ತಿರುಚಿ ಗಂಟುಗಳನ್ನಾಗಿ ಮಾಡಿದ್ದಾರೇನೋ ಎಂದೆನಿಸುತ್ತದೆ. ಸೊಟ್ಟವಾಗಿರುವ ಈ ಮರಗಳು 1940ರಿಂದಲೂ ಸ್ಥಳೀಯ ಅಕರ್ಷಣೆಯಾಗಿದೆ. ಇದರ ಮಾಲೀಕರಾದ ರಿಕ್ ಸಿಮಂಡ್ಸ್‌ರವರ ಪ್ರಕಾರ ಇಲ್ಲಿಗೆ ಪ್ರತೀವರ್ಷ 5000ಕ್ಕೂ ಹೆಚ್ಚು ಜನರು ಭೇಟಿ ನೀಡುತ್ತಾರಂತೆ.

ತಿರುಚಿಕೊಂಡು ಗಂಟು ಗಂಟಾಗಿರುವ ಮರಗಳು ಹಲವಾರು ಸಿದ್ಧಾಂತಕ್ಕೆ ದಾರಿ ಮಾಡಿಕೊಟ್ಟಿವೆ. ಇಲ್ಲಿನ ಮಣ್ಣಿನಲ್ಲಿ ಏನೋ ಇದೆಯೆಂದು ಕೆಲವರು ಹೇಳಿದರೆ ಉಲ್ಕಾಶಿಲೆ ಅಪ್ಪಳಿಸಿ ಈ ಪ್ರದೇಶವು ಕಲುಷಿತಗೊಂಡಿದೆ ಎಂದು ಮತ್ತೆ ಕೆಲವರು ಹೇಳುತ್ತಾರೆ. ಈ ಮರಗಳ ಮಾದರಿಯನ್ನು ತೆಗೆದುಕೊಂಡು ಬೇರೆಡೆ ಬೆಳೆಸಿದಾಗ ಅವು ತಿರುಚಿದ ಬೆಳವಣಿಗೆಯನ್ನೇ ಪ್ರದರ್ಶಿಸಿದ್ದು ಕಂಡುಬಂದಿದೆ. ಇದಕ್ಕೆ ಕಾರಣವು ತಳಿಶಾಸ್ತ್ರ (ಜೆನಿಟಿಕ್ಸ್)ದಲ್ಲೇ ಬೇರೂರಿರುವುದನ್ನು ಸೂಚಿಸುತ್ತದೆ.

ಬಹುಶಃ ಮ್ಯುಟೇಶನ್ ಪರಿಣಾಮವಾಗಿ ಮರಗಳು ಮೇಲಕ್ಕೆ ಬದಲಾಗಿ ಕೆಳಕ್ಕೆ ಬೆಳೆಯುವಂತೆ ಮಾಡುತ್ತದೆ. ಈ ನಡವಳಿಕೆಗೆ ಕಾರಣವಾದ ಜೀನ್(ವಂಶವಾಹಕ) ಮರಕ್ಕೆ ನಿಜವಾಗಿಯೂ ಮಾರಕವಾಗಿದೆ ಎಂಬುದಾಗಿ ಸಾಸ್ಕಾಚವಾನ್ ವಿಶ್ವ ವಿದ್ಯಾಲಯದ ತೋಟಗಾರಿಕಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಂತ್ರಜ್ಞ ರಿಕ್ ಸಾವಟ್ಕ್ಲಿ ವಿವರಿಸುತ್ತಾರೆ.

■ ಪ್ರಿಯಾಂಕ ವಿ.ಎಚ್.

